Rotary
2025-26
ಮಿಡ್‌ಟೌನ್ ನ್ಯೂಸ್
# Midtown News
R.I. DISTRICT 3182 Zone-10 Club No. 21853 Charter Date : 16-05-1984
In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty

President : Rtn. Harsha Kamath
Secretary : Rtn. Manjunath R.N.

Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 42 14 - 8 - 2025 ISSUE 5

## New Leadership Month

### ದಿನಾಂಕ 31-7-2025ರ ವಾರದ ಸಭೆಯ ವರದಿ

ದಿನಾಂಕ 31-7-2024ರ ವಾರದ ಸಭೆಯು ಅತಿಥಿ ಉಪನ್ಯಾಸಕರ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಹರ್ಷ ಬಿ.




ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಉಮಾ ಅಮರ್ ಇವರು ರೋಟರಿ ಮಾಹಿತಿಯನ್ನು ವಾಚಿಸಿದರು.

ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪ ಹೆಚ್.ಜಿ. ಇವರು ದಿನಾಂಕ 25-7-2025ರಂದು ಕ್ರಮವಾಗಿ ಹೊಳಲೂರು ಹಾಗೂ ಸೂಗೂರು ಶಾಲೆಗಳಲ್ಲಿ ನಡೆದ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭವು ಚೆನ್ನಾಗಿ ನಡೆದ ಬಗ್ಗೆ ಹಾಗೂ ಪ್ರಶಂಸನ ಪತ್ರವನ್ನು ಓದಿದರು. ಕಮ್ಯುನಿಟಿ ಸರ್ವೀಸ್ ನಿರ್ದೇಶಕರಾದ ರೊ. ಭಾಸ್ಕರ್ ಶೆಟ್ಟಿ ಅವರು ಹೊಳಲೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ತಾಯಿ ಮತ್ತು ಮಕ್ಕಳ ಆರೋಗ್ಯ ಕುರಿತಾ ಅರಿವು ಶಿಬಿರ ವಿವರಣೆಯನ್ನು ನೀಡಿದರು. ಸದರಿ ಕಾರ್ಯಕ್ರಮಕ್ಕೆ ಐರನ್ ಟಾನಿಕ್ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ಫಲಾನುಭವಿಗಳಿಗೆ ಕೊಡಲು ಅನುಕೂಲವಾಗಲು ರೂ. 5000/- ದೇಣಿಗೆಯಾಗಿ ರೊ. ಶಿವಶಂಕರ್ ಕೆ.ಜಿ. ಕೊಟ್ಟದ್ದಕ್ಕೆ ಧನ್ಯವಾದಗಳನ್ನು ತಿಳಿಸಲಾಯಿತು.

ಆ್ಯನ್ಸ್ ಕಾರ್ಯದರ್ಶಿ ಹಾಗೂ ರೊ. ಪ್ರೀತಿ ದೀಪಕ್ ಇವರು ದಿನಾಂಕ 2-8-2025ರಂದು ಮಧ್ಯಾಹ್ನ ಆ್ಯನ್ಸ್ ಕ್ಲಬ್ ವತಿಯಿಂದ ನಡೆಯುವ “Speech on Plant Based Whole Food” ಎಂಬುದರ ಬಗ್ಗೆ ಡಾ|| ಸ್ನೇಹ ಜೋಷಿ ಅವರಿಂದ ಅರಿವು ಮೂಡಿಸುವ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.




ಪೂರ್ವಾಧ್ಯಕ್ಷರಾದ ರೊ. ಡಾ. ಕೆ.ಬಿ. ಧನಂಜಯ ಇವರು ರೊ. ಡಾ|| ಪ್ರವೀಣ್ ದೇವರ ಬಾವಿರವರ ಪರಿಚಯ ಮಾಡಿದರು.

ನಂತರ ಡಾ|| ಪ್ರವೀಣ್ ದೇವರಬಾವಿ ಅವರು ಜುಲೈ ತಿಂಗಳಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯದ ರೋಟರಿ ಆಯೋಜಿತ ಕಾರ್ಯಕ್ರಮವಾಗಿದ್ದರಿಂದ ಅದನ್ನು ವಿಷಯವನ್ನಾಗಿಟ್ಟುಕೊಂಡು, ಸಕ್ಕರೆ ಖಾಯಿಲೆಯನ್ನು ಯಾವರೀತಿ ನಿಯಂತ್ರಣ ಮಾಡಬೇಕು ಎಂದು ವಿವರವಾಗಿ Slide Show ಮುಖಾಂತರ ಉಪನ್ಯಾಸ ನೀಡಿದರು. ಹಾಗೆ ಕೆಲವು ಉಪಯುಕ್ತ ಮಾಹಿತಿಯನ್ನು ನೀಡಿದರು. ಆರೋಗ್ಯ ಹಾಗೂ ಸುಖಕರ ಜೀವನ Power of life style choices.

## ವಾರದ ಸಭೆ

ದಿನಾಂಕ : **14-8-2025, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ವಿಷಯ : **ಕ್ಲಬ್ ಅಫೇರ್ಸ್**




ದಿನಾ ಕನಿಷ್ಟ 7 ರಿಂದ 8 ಗಂಟೆ ನಿದ್ರೆ ಅವಶ್ಯಕ, ಮಲಗುವ ಸಮಯದಲ್ಲಿ ಮೊಬೈಲ್ ಹಾಗೂ ಕಂಪ್ಯೂಟರ್‌ಗಳನ್ನು ಬಳಸಬಾರದು. ದಿನವು 35 ರಿಂದ 45 ನಿಮಿಷ ನಡೆಯುವುದು ಒಳ್ಳೆಯದು, ಸೈಕ್ಲಿಂಗ್ ಮತ್ತು ಈಜುವುದರಿಂದ ಮಧುಮೇಹಿಗಳಿಗೆ ಉತ್ತಮ ವ್ಯಾಯಾಮ. ಶರೀರದ ಬೊಜ್ಜು ಮತ್ತು ಅತಿ



ಯಾದ ಹೊಟ್ಟೆಯಿಂದ ಫ್ಯಾಟಿ ಲಿವರ್ ಜಾಸ್ತಿಯಾಗುತ್ತದೆ. ಥೈರಾಯ್ಡ್ ಖಾಯಿಲೆ ಇರುವವರು B.P. ಮತ್ತು Lypid Profile ಆಗಾಗ ಪರೀಕ್ಷೆ ಮಾಡಿಸಬೇಕು ಎಂಬ ಬಗ್ಗೆ ಮಾಹಿತಿ ನೀಡಿದರು. ಸರಿಯಾದ ಸಮಯಕ್ಕೆ ಸರಿಯಾದ ಆಹಾರ ಇವುಗಳೇ ಉತ್ತಮ ಆರೋಗ್ಯಕ್ಕೆ ಔಷಧ ಎಂದು ತಿಳಿಸಿದರು.

ಉಪನ್ಯಾಸಕ್ಕೂ ಮೊದಲು ರೋಟರಿ ಕ್ಲಬ್‌ನ ಸದಸ್ಯ ವೈದ್ಯರುಗಳಾದ ಡಾ|| ಪ್ರವೀಣ್ ದೇವರಬಾವಿ, ಡಾ|| ಗೌತಮ್, ಡಾ|| ರಮೇಶ್ ಆರ್., ಡಾ|| ರಮೇಶ್ ಜಿ.ಸಿ., ಡಾ|| ಇರ್ಫಾನ್ ಅಹ್ಮದ್, ಡಾ|| ಜೀನತ್ ಅಂಬರೀನ್, ಡಾ|| ಹರೀಶ್ ಎಂ., ಡಾ|| ನಿಶಾಂತ್ ತರನಮ್, ಡಾ|| ರಾಜೇಶ್ ಎಸ್.ಬಿ. ಅವರುಗಳನ್ನು ವೈದ್ಯರ ದಿನಾಚರಣೆ ಅಂಗವಾಗಿ ಸನ್ಮಾನಿಸಲಾಯಿತು.

- 2ನೇ ಪುಟಕ್ಕೆ

- 1ನೇ ಪುಟದಿಂದ




ಇಂದಿನ ಹಾಜರಾತಿ ಬಹುಮಾನಕ್ಕೆ ರೊ. ರಂಗರಾಜನ್ ಎಸ್.ಎಸ್. ಮತ್ತು ರೊ. ಡಾ|| ಶ್ರೀಧರ್ ಎಸ್. ಇವರುಗಳು ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ವಂದನಾರ್ಪಣೆ ನೆರವೇರಿಸಿದರು.








31-7-2025ರಂದು ಸಮುದಾಯ ಆರೋಗ್ಯ ಕೇಂದ್ರ, ಹೊಳಲೂರಿನಲ್ಲಿ ನಮ್ಮ ಕ್ಲಬ್ ವತಿಯಿಂದ ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರೊ. ಆರ್.ಎನ್. ಮಂಜುನಾಥ್‌ರವರು ವೇದಿಕೆಯಲ್ಲಿದ್ದವರನ್ನು ಮತ್ತು ಆಸ್ಪತ್ರೆಯ ಸಿಬ್ಬಂದಿಗಳನ್ನು ಸ್ವಾಗತಿಸಿದರು. ನಂತರ ವಿಷಯ ತಜ್ಞರಾಗಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಯಾಗಿದ್ದ ಮತ್ತು ಹಾಲಿ ಮುಖ್ಯ ವೈದ್ಯಾಧಿಕಾರಿಗಳಾದ ಡಾ|| ಮಂಜುನಾಥ್ ಅವರು ಅಲ್ಲಿದ್ದ 45 ಜನ ಗರ್ಭಿಣಿಯರು ಮತ್ತು ಮಹಿಳೆಯರಿಗೆ, ಗರ್ಭಧಾರಣೆಯ ನಂತರ ಅನುಸರಿಸಬೇಕಾದ ಕ್ರಮಗಳನ್ನು ವಿವರವಾಗಿ ತಿಳಿಸಿದರು.

ನಂತರ ಡಾ|| ಭರತ್ ಅವರು ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ಬಗ್ಗೆ ಮಾಹಿತಿ ನೀಡಿ, ಮಕ್ಕಳಿಗೆ ಪೌಷ್ಟಿಕಾಂಶ ಇರುವ ಆಹಾರಗಳನ್ನು ಮತ್ತು ಹಾಲನ್ನು ಕಡ್ಡಾಯವಾಗಿ ನೀಡಬೇಕೆಂದು ಸಲಹೆ ನೀಡಿದರು. ಬಂದಿದ್ದ ಎಲ್ಲಾ ಗರ್ಭಿಣಿ ಸ್ತ್ರೀಯರಿಗೆ 2 ತಿಂಗಳಿಗಾಗುವಷ್ಟು ಐರನ್ ಟಾನಿಕ್ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ನಂತರ ಡಾ|| ಮಂಜುನಾಥ್ ಮತ್ತು ಪ್ರಸೂತಿ ತಜ್ಞೆ ಡಾ|| ಲಕ್ಷ್ಮಿ ಇವರುಗಳನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮಕ್ಕೆ ಕ್ಲಬ್ಬಿನ ಹಲವಾರು ಸದಸ್ಯರು ಪಾಲ್ಗೊಂಡಿದ್ದರು.







4-8-2025ರಂದು ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ಇಂಟರ್‍ಯಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಕು. ಲಕ್ಷ್ಮಿ ಮತ್ತು ಸಂಗಡಿಗರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಸಹ ಶಿಕ್ಷರಾದ ಪ್ರಭುರವರು ಎಲ್ಲರಿಗೂ ಸ್ವಾಗತವನ್ನು ಕೋರಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಗಣ್ಯರು ನೆರವೇರಿಸಿದರು. ಸಹ ಶಿಕ್ಷಕರಾದ ಬಬಿತಕುಮಾರಿ ಇವರು ಪ್ರಾಸ್ತಾವಿಕ ನುಡಿಗಳನ್ನು ಮತ್ತು ವಾರ್ಷಿಕ ವರದಿಯನ್ನು ಮಂಡಿಸಿದರು. ರೊ. ಮಂಜಪ್ಪ ಕೆ. ಅರಕೆರೆ ಇವರು ಪದಗ್ರಹಣ ಅಧಿಕಾರಿಗಳಾಗಿ ಆಗಮಿಸಿ, ನೂತನ ಪದಾಧಿಕಾರಿಗಳಿಗೆ ಪದಗ್ರಹಣವನ್ನು ನೆರವೇರಿಸಿದರು. ಪದಾಧಿಕಾರಿಗಳಾಗಿ ವಿದ್ಯಾಶ್ರೀ ಹೆಚ್.- ಅಧ್ಯಕ್ಷೆ, ಸೃಜನ ವಿ.-ಉಪಾಧ್ಯಕ್ಷೆ, ತೇಜಸ್ ಕೆ.ಎಸ್. - ಕಾರ್ಯದರ್ಶಿ, ಯಶವಂತ ಎಂ.ಯು.-ಖಜಾಂಚಿ, ರಮ್ಯಾ ಹೆಚ್. - ಪಾಸ್ಟ್ ಪ್ರೆಸಿಡೆಂಟ್, ನಿರ್ದೇಶಕರಾಗಿ ರಕ್ಷಾ ಕೆ.ಎಂ., ರಾಹುಲ್ ಸಿ., ದೀಕ್ಷಿತಾ ಆರ್., ಸುಚಿತ್ರಾ ಬಿ., ನಿಖಿಲ್ ಪಿ.ಎ., ಲಕ್ಷ್ಮೀ ಗಣೇಶ ಕಂಬಳಿ ಆಯ್ಕೆಯಾಗಿರುತ್ತಾರೆ. ಅಧ್ಯಕ್ಷೆ ಕು. ವಿದ್ಯಾಶ್ರೀ ತನ್ನ ಕಿರು-ಪರಿಚಯದೊಂದಿಗೆ ಅಧ್ಯಕ್ಷೀಯ ಸ್ವೀಕಾರ ಭಾಷಣ ಮಾಡಿದಳು. ಸಹ ಶಿಕ್ಷಕರಾದ ಅಣ್ಣಪ್ಪ ಅರಳೆಹಳ್ಳಿ ಅವರು ಮನವಿಪತ್ರ ಮಂಡಿಸಿದರು. ರೊ. ಕೆ. ಮಂಜಪ್ಪರವರ ಪರಿಚಯವನ್ನು ದೈಹಿಕ ಶಿಕ್ಷಕರಾದ ಬಸವರಾಜ್ ಮಾಡಿಕೊಟ್ಟರು. ಮಂಜಪ್ಪನವರು ಇಂಟರ್‍ಯಾಕ್ಟ್‌ಕ್ಲಬ್ ಕುರಿತು ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಪ್ರೇರಣಾದಾಯಕವಾದ ಹಿತವಚನ ನೀಡಿದರು. ರೋಟರಿ ಬ್ಲಡ್ ಸೆಂಟರ್ ವತಿಯಿಂದ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ. ಟಾಪರ್ಸ್‌ಗಳಾದ ಸ್ವಾತಿ, ಜೀವಿತ ಮತ್ತು ಮೇಘನಾ ಇವರುಗಳಿಗೆ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ಮುಖ್ಯ ಶಿಕ್ಷಕಿ ಶ್ರೀಮತಿ ಕಮಲಮ್ಮ ಅವರು ಪ್ರೇರಣಾತ್ಮಕ ಭಾಷಣ ಕಾರ್ಯಕ್ರಮಕ್ಕೆ ಮಹತ್ವ ನೀಡಿತ್ತು. ಅಧ್ಯಕ್ಷತೆ ವಹಿಸಿದ್ದ ಎಸ್.ಡಿ.ಎಂ.ಸಿ. ಅಧ್ಯಕ್ಷ ಶ್ರೀ ರಮೇಶ್, ಮುಖ್ಯ ಅತಿಥಿಗಳಾಗಿ ರೊ. ಡಾ. ಧನಂಜಯ ಕೆ.ಬಿ., ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್, ರೊ. ಸಂತೋಷ್ ಎಸ್.ಎಸ್., ರೊ. ಮೇನಕ ಜಗದೀಶ್, ರೊ. ಪ್ರೀತಿ ದೀಪಕ್ ಮತ್ತು ರೊ. ಸುನಿತಾ ಚೇತನ್ ಉಪಸ್ಥಿತರಿದ್ದರು. ಸಹ ಶಿಕ್ಷಕರಾದ ನಾಗವೇಣಿಯವರು ವಂದನಾರ್ಪಣೆಯನ್ನು ನೇರವೇರಿಸಿದರು. ಬಸವರಾಜ್‌ರವರು ಸಂಪೂರ್ಣ ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿದರು.




4-8-2025ರಂದು ಹೊಳೆಹೊನ್ನೂರಿನ ಭದ್ರಾ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಕು. ಪಲ್ಲವಿ ಮತ್ತು ಸಂಗಡಿಗರ ಪ್ರಾರ್ಥನೆಯೊಂದಿಗೆ ಚಾಲನೆ ನೀಡಲಾಯಿತು. ಸ್ವಾಗತ ಭಾಷಣವನ್ನು ಕು. ಅಕ್ಷತಾ ಬಿ.ಬಿ. ನಡೆಸಿ ಕೊಟ್ಟಳು. ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಗಣ್ಯರು ನೆರವೇರಿಸಿದರು. ಶ್ರೀ ನಾಗರಾಜಪ್ಪರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಾರ್ಷಿಕ ವರದಿಯನ್ನು ಕು. ಕೀರ್ತನಾ ಹೆಚ್.ಜಿ. ಮಂಡಿಸಿದಳು. ಪದಗ್ರಹಣ ಅಧಿಕಾರಿಗಳಾಗಿ ರೊ. ಡಾ. ಧನಂಜಯ ಕೆ.ಬಿ. ಆಗಮಿಸಿ, ನೂತನ ಪದಾಧಿಕಾರಿಗಳಿಗೆ ಪದಗ್ರಹಣವನ್ನು ನೆರವೇರಿಸಿದರು. ಪದಾಧಿಕಾರಿಗಳಾಗಿ ನಯನ ಎಸ್.- ಅಧ್ಯಕ್ಷೆ, ತನುಶ್ರಿ-ಉಪಾಧ್ಯಕ್ಷೆ, ದೀಕ್ಷಾ ಪಿ.-ಕಾರ್ಯದರ್ಶಿ, ಪ್ರಸಾದ್ ಕೆ.-ಖಜಾಂಚಿ, ತೇಜಸ್ವಿ - ಪಾಸ್ಟ್ ಪ್ರೆಸಿಡೆಂಟ್, ನಿರ್ದೇಶಕರಾಗಿ ಅಕ್ಷತಾ ಜೆ.ಬಿ., ಕೀರ್ತನಾ ಹೆಚ್.ಜಿ., ಯಶಸ್ವಿನಿ ಡಿ.ಎಸ್., ತುಳಸಿ, ನಿಗರ್ ಬಾನು ಆಯ್ಕೆಯಾಗಿರುತ್ತಾರೆ. ಅಧ್ಯಕ್ಷೆ ಕು. ನಯನ ಎಸ್. ತನ್ನ ಕಿರುಪರಿಚಯದೊಂದಿಗೆ ಅಧ್ಯಕ್ಷೀಯ ಸ್ವೀಕಾರ ಭಾಷಣ ಮಾಡಿದಳು. ಸಹ ಶಿಕ್ಷಕರಾದ ನಾಗರಾಜ್ ಮನವಿಪತ್ರ ಮಂಡಿಸಿದರು. ರೊ. ಡಾ. ಧನಂಜಯ ಕೆ.ಬಿ. ಪರಿಚಯವನ್ನು ಕು. ಚಂದನಾ ಹೆಚ್.ಎಸ್. ಮಾಡಿಕೊಟ್ಟಳು. ಡಾ. ಧನಂಜಯರವರು ಮಕ್ಕಳಿಗೆ ಪ್ರೇರಣಾದಾಯಕ ಮತ್ತು ಮಾರ್ಗದರ್ಶಕ ಭಾಷಣ ಮಾಡಿದರು. ರೋಟರಿ ಬ್ಲಡ್ ಸೆಂಟರ್ ವತಿಯಿಂದ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ. ಟಾಪರ್ಸ್‌ಗಳಾದ ರಮ್ಯಾ ಪಿ., ಸಹನಾ ಬಿ.ಎಂ. ಮತ್ತು ಕೀರ್ತನಾ ಹೆಚ್.ಜಿ. ಇವರುಗಳಿಗೆ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಉಪಪ್ರಾಂಶುಪಾಲರಾದ ಶ್ರೀ ತಿಪ್ಪೇಶ್ ನಾಯಕ್ ಅಧ್ಯಕ್ಷೀಯ ಭಾಷಣ ಮಾಡಿದರು. ವಂದನಾರ್ಪಣೆ ಮತ್ತು ನಿರೂಪಣೆಯನ್ನು ಕು. ದೀಕ್ಷಾ ಪಿ. ಅತ್ಯಂತ ಸುಂದರಾವಗಿ ನಿರ್ವಹಿಸಿದಳು. ಸಂಪೂರ್ಣ ಕಾರ್ಯಕ್ರಮವು ವಿದ್ಯಾರ್ಥಿಗಳೇ ಸ್ಫೂರ್ತಿದಾಯಕ ರೀತಿಯಲ್ಲಿ ನಡೆಸಿಕೊಟ್ಟರು.




ರೋಟರಿ ಮಿಡ್‌ಟೌನ್ ಆ್ಯನ್ಸ್ ಕ್ಲಬ್ ಮತ್ತು ಇನ್ನರ್ ವ್ಹೀಲ್ ಸೆಂಚುರಿ ಕ್ಲಬ್, ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ರೋಟರಿ ರಕ್ತನಿಧಿ ಕೇಂದ್ರದ ಸಭಾಂಗಣದಲ್ಲಿ ಪೂರ್ಣ ಸಸ್ಯಾಧಾರಿತ ಆಹಾರ ಪದ್ಧತಿ ಶಿಬಿರ ಏರ್ಪಡಿಸಲಾಗಿತ್ತು. ಆ್ಯನ್ಸ್ ಕ್ಲಬ್ ಅಧ್ಯಕ್ಷೆ ಪವಿತ್ರ ಕಾಮತ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅನ್ನಪೂರ್ಣ ರಂಗರಾಜನ್, ಪ್ರೇಮಾ ಆನಂದ್ ಉಪಸ್ಥಿತರಿದ್ದರು. ಕಾರ್ಯದರ್ಶಿಣಿ ರೊ. ಪ್ರೀತಿ ದೀಪಕ್ ಕಾರ್ಯಕ್ರಮವನ್ನು ನಿರೂಪಿಸಿದರು. ಹಾಗೂ ಶ್ರೀಮತಿ ಸ್ನೇಹ ಜೋಶಿ ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿಯನ್ನು ನೀಡಿದರು.

# ROTARY INFORMATION



**Rtn. Uma Amar**

## Fighting Disease

We believe good health care is everyone's right. Yet 400 million people in the world can't afford or don't have access to basic health care.

Disease results in misery, pain, and poverty for millions of people worldwide. That's why treating and preventing disease is so important to us. We lead efforts both large and small. We set up temporary clinics, blood donation centers, and training facilities in underserved communities struggling with outbreaks and health care access. We design and build infrastructure that allows doctors, patients, and governments to work together.

Our members combat diseases like malaria, HIV/AIDS, Alzheimer's, multiple sclerosis,diabetes, and polio. Prevention is important, which is why we also focus on health education and bringing people routine hearing, vision, and dental care.

**How Rotary makes help happen**

We educate and equip communities to stop the spread of life-threatening diseases. Rotary members have hundreds of health projects underway around the world at any given time.




ದೊಡ್ಡೇರಿ ಜ್ಞಾನವಾಹಿನಿ ಪ್ರೌಢಶಾಲೆಯ ಮಕ್ಕಳಿಗೆ ಸ್ವರ್ಣ ಬಿಂದು ಪ್ರಾಶನವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಅಸಿಸ್ಟೆಂಟ್ ಗವರ್ನರ್ ರೊ. ಕೆ.ಪಿ. ಶೆಟ್ಟಿ ಉಪಸ್ಥಿತರಿದ್ದರು. ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್, ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್, ರೊ. ಶಿಲ್ಪ ಹೆಚ್.ಜಿ., ರೊ. ಮೇನಕ ಜಗದೀಶ್, ರೊ. ಉಜ್ವಲ ರವಿ, ರೊ. ಸಂತೋಷ್ ಎಸ್.ಎಸ್. ಹಾಗೂ ಆ್ಯನ್ಸ್ ಕ್ಲಬ್ಬಿನ ಅಧ್ಯಕ್ಷೆ ಪವಿತ್ರ ಕಾಮತ್ ಮತ್ತು ಕಾರ್ಯದರ್ಶಿಣಿ ರೊ. ಪ್ರೀತಿ ದೀಪಕ್ ಪಾಲ್ಗೊಂಡಿದ್ದರು.

## ROTARIAN BIRTHDAY *Greetings to*

| | |
|---|---|
| Rtn. Sunitha Chethan | Aug-01 |
| Rtn. Shwetha Acharya | Aug-01 |
| Rtn. Arjun D.M. | Aug-01 |
| Rtn. Dr. Shivaramakrishna A. | Aug-04 |
| Rtn. Danesh C. | Aug-08 |
| Rtn. Sumanth | Aug-09 |
| Rtn. Mariyappa H. | Aug-10 |
| Rtn. Manjappa K. Arakaere | Aug-12 |

## ANN BIRTHDAY *Greetings to*

| | |
|---|---|
| Ann. Vidya Manjunath | Aug-02 |
| Ann. Namitha K.S. Arjun | Aug-02 |
| Ann. Roopa Sripathi | Aug-04 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764